# ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
# ಕುಂದಾಪುರ

ಒ.ಎಸ್.ನಂಬ್ರ: **372/2017**
ಪಿ.ಡಬ್ಲ್ಯೂ ಃ **02**

ದಿನಾಂಕಃ **22-07-2024** ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು ಃ **2** ಮತ್ತು **3** ನೇ ಪ್ರತಿವಾದಿ ಪರ ಶ್ರೀ ಎನ್ ಎಸ್ ಆರ್ ಬಿ ವಕೀಲರಿಂದ

ನಾನು ಆಟೋರಿಕ್ಷಾ ಓಡಿಸುತ್ತೇನೆ. ನಾನು 1966 ನೇ ಇಸವಿಯಿಂದ ಹಲ್ಲಾಡಿಯಲ್ಲಿ ವಾಸವಿರುತ್ತೇನೆ. ನನ್ನ ಹೆಂಡತಿಯ ಹೆಸರಿನಲ್ಲಿ ಸಿರಿಯಾರ ಗ್ರಾಮದಲ್ಲಿ ಎರಡು ಎಕರೆ ಜಮೀನು ಇರುತ್ತದೆ. ನನ್ನ ಹೆಂಡತಿಯ ಹೆಸರಿನಲ್ಲಿರುವ ಜಮೀನಿನ ಸರ್ವೆ ನಂಬ್ರ ಗೊತ್ತಿರುವುದಿಲ್ಲ. ನಾನು ಭೀಮಾಚಾರ್ ರ ಸ್ಥಳದಲ್ಲಿ ಮನೆ ಮಾಡಿ ವಾಸವಿರುತ್ತೇನೆ. ಭೀಮಾಚಾರ್ ರವರಿಗೆ ಸೇರಿದ ಸ್ಥಳದ ಸರ್ವೆ ನಂಬ್ರ ನನಗೆ ಗೊತ್ತಿರುವುದಿಲ್ಲ. ನಾನು ವಾಸವಿರುವ ಮನೆಯಿಂದ ಗಿರಿಜಾ ಮೊಗೇರ್ತಿ ರವರ ಸ್ಥಳ 300 ಮೀಟರ್ ದೂರದಲ್ಲಿ ಇರುತ್ತದೆ.

2. ಈ ಪ್ರಕರಣವನ್ನು ಸುರೇಶ್ ದಾಖಲಿಸಿರುತ್ತಾರೆ. ಶ್ರೀನಾಥನ ಮೇಲೆ ದಾವೆ ದಾಖಲಿಸಿರಬಹುದು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿ ಕೊಟ್ಟವರು ಯಾರು ಎಂದು ಗೊತ್ತಿರುವುದಿಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಶ್ರೀನಾಥ ಹೇಳಿರುತ್ತಾರೆ. ಈ ದಾವೆಯನ್ನು ದಾಖಲಿಸುವ ಸಲುವಾಗಿ ಸಂಬಂದಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂಬ್ರ ನನಗೆ ಗೊತ್ತಿರುವುದಿಲ್ಲ. ಆರ್ ಟಿ ಸಿ ಗಿರಿಜಾ ಮೊಗೇರ್ತಿ ಮತ್ತು ಲಕ್ಷ್ಮಣ ನಾಯ್ಕರವರ ಹೆಸರಿನಲ್ಲಿ ಇರುತ್ತದೆ.

3. 1979-80 ರ ಆರ್ ಟಿ ಸಿ ಯಲ್ಲಿ ಆ ಇಬ್ಬರ ಹೆಸರು ನಾನು ನೋಡಿದಂತೆ ಕಂಡು ಬರುತ್ತಿತ್ತು. ನಾನು ಆ ಆರ್ ಟಿ ಸಿ ಯನ್ನು ನೋಡಿರುವುದಿಲ್ಲ. ಲಕ್ಷ್ಮಣ ನಾಯ್ಕರವರು ಡಿಕ್ಲರೇಷನ್ ನಲ್ಲಿ ಆಸ್ತಿ ನನ್ನ ಹಾಗೂ ನನ್ನ ಹೆಂಡತಿ ಹೆಸರಿಗೆ ಆಗಿದ್ದು, ಆರ್ ಟಿ ಸಿ ಯಲ್ಲೂ ನಮ್ಮ ಹೆಸರು ಇರುತ್ತದೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನನ್ನ ಬಳಿ ಅವರು ಈ ರೀತಿ ಹೇಳಿದ್ದು 1980-81 ರಲ್ಲಿ ನನ್ನ ಅಕ್ಕನ ಮನೆಯನ್ನು ಕಟ್ಟುವಾಗ. ಮೂಲತಃ ಬಂಕಾಪುರದ ಯುಮುನಾ ಬಾಯಿ ಮೂರ್ತಿ ಆಚಾರ್ ರವರಿಗೆ ಸೇರಿತ್ತು. ಅವರಿಂದ ಲಕ್ಷ್ಮಣ ನಾಯ್ಕ ರವರು ಈ ಆಸ್ತಿಯನ್ನು ಪಡೆದಿರುತ್ತಾರೆ. ಧಣಿಗಳು ಅಲ್ಲಿ ಬಂದಾಗ ನನ್ನ ಹೊಟ್ಟೆಗೆ ಏನಾದರೂ ಕೊಡಿ ಎಂದು ಕೇಳಿದ್ದು, ಆಗ ಅವರು ದಾವಾ ಆಸ್ತಿಯನ್ನು ತೋರಿಸಿ, ಇದರಲ್ಲಿ ಮಾಡಿಕೊಳ್ಳಿ

ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 1968 ರಲ್ಲಿ ಈ ರೀತಿ ನನಗೆ ಹೇಳಿರುತ್ತಾರೆ. ಆಗಿದನಿಂದಲೂ ಅವರು ಆ ಜಾಗದಲ್ಲಿ ವಾಸ್ತವ್ಯದಲ್ಲಿ ಇದ್ದರು.

4. ನಾನು 1955 ನೇ ಇಸವಿಯಲ್ಲಿ ಹುಟ್ಟಿರುತ್ತೇನೆ. ಆಗ ನನಗೆ 18 ವರ್ಷ ವಯಸ್ಸಿತ್ತು. ಈ ವಿಚಾರವನ್ನು ಲಕ್ಷ್ಮಣ ನಾಯ್ಕ ರವರು ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದಾಗ ಹೇಳಿರುತ್ತಾರೆ. ಲಕ್ಷ್ಮಣ ನಾಯ್ಕ ರವರು ದಾಖಲಾತಿಯನ್ನು ತೋರಿಸಿರುವುದಿಲ್ಲ, ನಾನು ಕೇಳಿರುವುದೂ ಇಲ್ಲ. ಆಸ್ತಿ, ಮೂಲಗೇಣಿಯೂ ಅಲ್ಲ, ಚಾಲಗೇಣಿಯೂ ಅಲ್ಲ, ಖಾಲಿ ಇದ್ದುದನ್ನು ಉಪಯೋಗಿಸಿಕೊಳ್ಳಿ ಎಂದು ಹೇಳಿದ್ದರು ಎಂದು ನನಗೆ ಲಕ್ಷ್ಮಣ ನಾಯ್ಕರವರು ತಿಳಿಸಿರುತ್ತಾರೆ. ಆಸ್ತಿಯನ್ನು ಗೇಣಿಗೆ ಲಕ್ಷ್ಮಣ ನಾಯ್ಕ ರು ಹಾಗೂ ಗಿರಿಜ ಮೊಗೇರ್ತಿ 1974 ರಲ್ಲಿ ಡಿಕ್ಲರೇಷನ್ ಕಾನೂನು ಬಂದಾಗ ಅವರು ಇಡೀ ಗ್ರಾಮಕ್ಕೆ ಡಿಕ್ಲರೇಷನ್ ಕೊಡಿ ಎಂದು ಹೇಳಿರುತ್ತಾರೆ. ಇಬ್ಬರೂ ಒಟ್ಟಿಗೆ ಡಿಕ್ಲರೇಷನ್ ಅರ್ಜಿ ಕೊಟ್ಟರು ಎಂದು ನನಗೆ ತಿಳಿಸಿರುತ್ತಾರೆ.

5. ಅವರಿಬ್ಬರ ಹೆಸರಿಗೆ ತೀರ್ಪು ಆಯ್ತು ಎಂದು ಲಕ್ಷ್ಮಣ ನಾಯ್ಕ ರವರು ಹೇಳಿರುತ್ತಾರೆ. ಡಿಕ್ಲರೇಷನ್ ಹಾಗೂ ತೀರ್ಪು ಆದ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ, ಆದರೆ ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಡಿಕ್ಲರೇಷನ್ ತೀರ್ಪು ಆದ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರು ಸಹ ಶ್ರೀನಾಥ ರವರು ಹೇಳಿದ ರೀತಿ ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಲಕ್ಷ್ಮಣ ನಾಯ್ಕರವರು ನನಗೆ ಹೇಳಿದಂತೆ ಹೇಳುತ್ತಿರುತ್ತೇನೆ ಎಂದು ನುಡಿಯುತ್ತಾರೆ.

6. ಶ್ರೀನಾಥ ರವರು ಈಗ ಹಳ್ನಾಡಿ ಗ್ರಾಮದಲ್ಲಿ ವಾಸವಿರುತ್ತಾರೆ. ದಾವೆ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ಶ್ರೀನಾಥನ ಚಿತಾವಣೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ